
ಓದುವ ಅಭಿರುಚಿ ಬೆಳೆಸುವ

# ಸಾಹಿತ್ಯ ಮಂಟಪ

೪



ಧ್ವನಿಯ ಆವರಣದಲ್ಲಿ ಬೆಳೆದ ಕುಂಬಳ ಬಳ್ಳಿಯ ಮಿಡಿ – ಫೋಟೋ: ಸರ್‌ಸ್ವತಿ ಮೊಕಾಶಿ

ಇಲ್ಲಿನ ಕಥೆ, ಕವನಗಳನ್ನು
ನೀವೂ ಓದಿರಿ; ಬೇರೆಯವರಿಗೂ
ಓದಿ ಹೇಳಿರಿ.

ನವೆಂಬರ್ – ಡಿಸೆಂಬರ್ ೨೦೨೪–೨೫

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
**Dhwani Educational Resource Centre**

ಆರಂಭ ಯೋಜನೆ
**Arambha 2024-25 Project
is Supported by Many
Individual Donors**

# ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಸ್ವರಚಿತ ಕಥೆ – ಕವನಗಳು, ಮೂಲ ಇಂಗ್ಲೀಷ್ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ನಮ್ಮ ನಮ್ಮ ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಸದಾಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚು ಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

**– ಧ್ವನಿ ಬಳಗ**

ಈ ಸಲದ

# ಸಾಹಿತ್ಯ ಮಂಟಪದಲ್ಲಿ....


* **ಚಿಕ್ಕಿ...! ಚಿಕ್ಕಿ...!**
  - ಕಥಾನಿರೂಪಣೆ: ಪ್ರೇಮಾ ಶಿವಾನಂದ - ೪

* **ಹುಲಿರಾಯನಿಗೊಂದು ಮರಿ**
  - ಆನಂದ ಪಾಟೀಲ್ - ೧೦

* **ಜಯದ್ರಥನ ವಧೆ** -ವಿವಿಧ ಮೂಲಗಳಿಂದ - ೧೬

* **ಜತೀನ್ ಓಡುವುದನ್ನು ನಿಲ್ಲಿಸಿದಾಗ**
  - ಅನು: ಸಂಗಮೇಶ ಎಮ್ - ೨೭

* **When Jatin Stopped Running** - ಅಂತರ್ಜಾಲ - ೩೦

* ಕವನ: **ನನ್ನ ತೋಟ** - ಪ. ಗು. ಸಿದ್ದಾಪುರ - ೩೩

* ಕವನ: **ಒಂಟೆ** - ಸಿದ್ಧಯ್ಯ ಪುರಾಣಿಕ - ೩೫

# ಚಿಕ್ಕಿ... ಚಿಕ್ಕಿ...!

ಪ್ರವಾಸ ಪಾಠಕ್ಕೆ ಪೂರಕ



ಶಾಲೆಯ ಮಕ್ಕಳೆಲ್ಲ ಗೋಕರ್ಣ ಪ್ರವಾಸಕ್ಕೆ ಹೋಗಿದ್ದರು. ಚಂದ್ರಮೌಳೇಶ್ವರ ದೇವಸ್ಥಾನಗಳನ್ನು ನೋಡಿದರು. ಅನಂತರ ಸಮುದ್ರ ತೀರಕ್ಕೆ ಹೋದರು. ಅಲ್ಲಿ ಅಲೆಗಳ ಆಟ ನಡೆದಿತ್ತು.

ಸಾವಿರಾರು ಜನ ಸಮುದ್ರದ ಅಂಚಿನ ನೀರಿನಲ್ಲಿ ಸ್ನಾನ ಮಾಡುತ್ತಿದ್ದರು; ಕೆಲವರು ಮುಳುಗಿ ಏಳುತ್ತಿದ್ದರು; ಕೆಲವರು ನೀರು ಸ್ಕೂಟರ್ ಹೊಡೆಯುತ್ತಿದ್ದರು; ಹಲವರು ಮರಳಿನಲ್ಲಿ ಆಡುವುದೂ ಓಡುವುದೂ ಮಾಡುತ್ತಿದ್ದರು.

ಮಕ್ಕಳಿಗೆಲ್ಲ ಖುಷಿಯೋ ಖುಷಿ. ಅವರಲ್ಲಿ ಒಬ್ಬನಾಗಿದ್ದ ಬಸವರಾಜ ಓಡಾಡ್ತಾ ಓಡಾಡ್ತಾ ಗುಂಪಿನಿಂದ ಬೇರೆಯಾದ.

ಬಸವರಾಜ ಸಮುದ್ರ ತೀರದಲ್ಲಿ ಇನ್ನೂ ಸ್ವಲ್ಪ ದೂರಕ್ಕೆ ಓಡಿದ. ಆಗೆಲ್ಲ ಅವನ ಪ್ಯಾಂಟಿನ ಜೇಬಿನಲ್ಲಿದ್ದ ಕಾಸುಗಳು ಸದ್ದು ಮಾಡುತ್ತ ಕುಣಿಯುತ್ತಿದ್ದವು.

ಅವುಗಳನ್ನು ತೆಗೆದುಕೊಂಡು, ಎರಡೂ ಅಂಗೈ ಜೋಡಿಸಿ ಬೊಗಸೆಯಲ್ಲಿ 'ಟಣ ಟಣ' ಅಲ್ಲಾಡಿಸುತ್ತ ಓಡುತ್ತಿದ್ದನು.

ಸ್ವಲ್ಪ ಹೊತ್ತಾದ ಮೇಲೆ ಗಕ್ಕನೆ ನಿಂತುಬಿಟ್ಟನು. ಬೊಗಸೆಯಲ್ಲಿ ಒಂದೂ ನಾಣ್ಯವಿಲ್ಲ. ಓಡುವ ರಭಸಕ್ಕೆ ಎಲ್ಲ ಕಾಸುಗಳೂ ಕಾಣೆಯಾಗಿದ್ದವು. ತನ್ನ ಸುತ್ತಮುತ್ತಲೂ ಹುಡುಕಾಡಿದ ಎಲ್ಲೂ ಸಿಗಲಿಲ್ಲ. ಅಳತೊಡಗಿದ. ಅಳುತ್ತ ಗೆಳೆಯರ ಹತ್ತಿರ ಬಂದ.

"ಯಾಕೋ ಬಸವರಾಜ ಏನಾಯಿತು?" ಎಂದು ಗೆಳೆಯರು ಕೇಳಿದರು.

"ಅಮ್ಮ ನನಗೆ ಏನಾದ್ರೂ ತಿಂಡಿ ತಗೋ ಅಂತ ಸ್ವಲ್ಪ ಪುಡಿಗಾಸು

ಕೊಟ್ಟಿದ್ದರು. ಅವೆಲ್ಲ ಕಳೆದು ಹೋದವು." ಎಂದನು ಕಣ್ಣೀರು ಒರೆಸಿಕೊಳ್ಳುತ್ತಾ.

ಎಲ್ಲ ಗೆಳೆಯರೂ ಬಸವರಾಜನನ್ನು ಸಮಾಧಾನ ಪಡಿಸುತ್ತಾ,"ಆಯಿತು ಬಾ... ಎಲ್ಲರೂ ಕೂಡಿ ಹುಡುಕೋಣಂತೆ, ಈಗ ನಮ್ಮ ಜೊತೆ ಆಟ ಆಡು ಬಾ..." ಎಂದು ಅವನನ್ನು ತಮ್ಮ ಜೊತೆಗೆ ಕರೆದುಕೊಂಡು ಹೋದರು. ಎಲ್ಲರೊಂದಿಗೆ ಆಟವಾಡುತ್ತ ಬಸವರಾಜ ತನ್ನ ಪುಡಿಗಾಸು ಕಳೆದದ್ದನ್ನು ಮರೆತೇ ಬಿಟ್ಟ.

ಇನ್ನು ಕೆಲವು ಮಕ್ಕಳು ಮರಳಿನಲ್ಲಿ ಮನೆ ಮಾಡಿ ಆಡುತ್ತಿದ್ದರು. ಅವರು ಒಂದಾದ

ಮೇಲೆ ಒಂದು ಮನೆಗಳ ಸಾಲು ಮಾಡುತ್ತಿದ್ದರು. ಆ ಹುಡುಗರಿಗೆ ಒಂದೊಂದೇ ಕಾಸುಗಳು ಸಿಗತೊಡಗಿದವು. ಎಲ್ಲ ಕಾಸುಗಳನ್ನು ಒಟ್ಟುಗೂಡಿಸಿ ಟೀಚರ್‌ಗೆ ಕೊಟ್ಟರು.

ಟೀಚರ್ ಎಲ್ಲ ಮಕ್ಕಳನ್ನೂ ತಮ್ಮ ಬಳಿಗೆ ಕರೆದು,"ಈ ಕಾಸುಗಳು ಯಾರದ್ದು?" ಎಂದು ಕೇಳಿದರು.

ಬಸವರಾಜ ಉತ್ಸಾಹದಿಂದ, "ಟೀಚರ್... ಅವು ನನ್ನವೇ. ನಮ್ಮಮ್ಮ ಏನಾದ್ರೂ ತಗೋ ಅಂತ ಕೊಟ್ಟಿದ್ದರು." ಅಂದ.

ಟೀಚರ್ ಎಲ್ಲ ಕಾಸುಗಳನ್ನೂ ಬಸವರಾಜನಿಗೆ ಕೊಡಲು ಮುಂದಾದರು. ಆಗ ಬಸವರಾಜ, "ನನಗೆ ಕೊಡಬೇಡಿ ಟೀಚರ್. ನನ್ನ

ಎಲ್ಲ ಗೆಳೆಯರಿಗೂ ಅದರಿಂದ ಚಿಕ್ಕಿ ಕೊಡಿಸಿ." ಎನ್ನುತ್ತ ಸಮುದ್ರ ತೀರದಲ್ಲೇ ಇದ್ದ ಅಂಗಡಿಯ ಕಡೆಗೆ ಓಡತೊಡಗಿದನು. *

ಕಥೆ ಹೇಳಿದವರು: ಇಂಚರ ಬಿರಾದಾರ
ಬೆಂಗಳೂರು
ಕಥಾನಿರೂಪಣೆ: ಪ್ರೇಮಾ ಶಿವಾನಂದ
ಧ್ವನಿ ಬಳಗ

**ಮನ ಮಂಥನ:**

* ನೀನು ಶಾಲೆಯಿಂದ ಪ್ರವಾಸಕ್ಕೆ ಹೋಗಿರುವೆಯಾ? ಯಾವ ಯಾವ ಸ್ಥಳಕ್ಕೆ ಹೋಗಿರುವೆ?
* ಪ್ರವಾಸಕ್ಕೆ ಹೋದಾಗ ಏನನ್ನಾದರೂ ಕಳೆದುಕೊಂಡಿರುವೆಯಾ? ಆಗ ನಿನಗೆ ಆದ ಅನುಭವವನ್ನು ತರಗತಿಯಲ್ಲಿ ಹಂಚಿಕೊ.

# ಹುಲಿರಾಯನಿಗೊಂದು ಮರಿ

– ಆನಂದ ಪಾಟೀಲ



ಖುಷಿ ಓದಿಗಾಗಿ

ಹಳ್ಳಿ ಜಾತ್ರೆಯೊಂದರಲ್ಲಿ ಜಾದುಗಾರನೊಬ್ಬ ಜಾದೂ ಮಾಡುತ್ತಿದ್ದ. ತನ್ನ ಟೋಪಿ ಒಳಗಿಂದ ಮೊಲವೊಂದನ್ನು ಅವನು ತೆಗೆದ. ಅದನ್ನು ನೋಡಿ ಜನ ಜೋರಾಗಿ ಚಪ್ಪಾಳೆ ತಟ್ಟಿದರು.

ಜಾದೂಗಾರನ ಕೈಚಳಕವನ್ನು ಪೊದೆಯ ಹಿಂದೆ ಕೂತಿದ್ದ ಹುಲಿಯೊಂದು ನೋಡಿತು. ಅದು ಜನರಿಗಾಗಲೀ ಜಾದೂಗಾರನಿಗಾಗಲೀ ಗೊತ್ತಾಗಲಿಲ್ಲ. ಅಂದಿನ ರಾತ್ರಿ ಜಾದೂಗಾರ ಮನೆಗೆ ತೆರಳುತಿದ್ದ. ಆಗ ನಡುರಸ್ತೆಯಲ್ಲಿ ಹುಲಿ ಅಡ್ಡ ಬಂತು.

"ನೀನು ಟೋಪಿಯೊಳಗಿಂದ ಮೊಲವನ್ನು ತೆಗೆದಿದ್ದನ್ನು ನಾ ನೋಡಿದೆ. ನನಗೊಂದು ಹುಲಿಮರಿಯನ್ನು ತೆಗೆದುಕೊಡು." ಎಂದು ಹುಲಿರಾಯ ಕೇಳಿದ.

ಹುಲಿಯ ಕೋರಿಕೆ ಕೇಳಿ ಜಾದೂಗಾರನಿಗೆ ನಡುಕ ಬಂತು. ಅದಕ್ಕೆ ಜಾದೂಗಾರ,"ಇಲ್ಲ, ಮೊಲದ ಮರಿ ಯಾವಾಗಲೂ ನನ್ನ ಚೀಲದಲ್ಲೇ ಇರುತ್ತೆ. ಯಾವ ಪ್ರಾಣಿಯನ್ನೂ ಸೃಷ್ಟಿಸುವುದು

ನನ್ನಿಂದ ಸಾಧ್ಯವಿಲ್ಲ. ನಾನು ಜಾದೂ ಮಾಡ್ತೀನಿ ಅಷ್ಟೇ." ನಡುಕದ ಸ್ವರದಲ್ಲೇ ಎಲ್ಲಾ ಸತ್ಯವನ್ನು ಜಾದುಗಾರ ಹುಲಿಗೆ ಹೇಳಿಬಿಟ್ಟ. ಅವನ ಮಾತಿನಿಂದ ಹುಲಿಗೇನೂ ಸಮಾಧಾನ ಆಗಲಿಲ್ಲ.

"ನಿನ್ನ ಜೀವ ಉಳಿಯಬೇಕಾದರೆ ನನಗೊಂದು ಹುಲಿಮರಿ ಸೃಷ್ಟಿಸಿ ಕೊಡಬೇಕು." ಅಂತ ಹುಲಿರಾಯ ಘರ್ಜಿಸಿದ.

ಜಾದೂಗಾರ ನಡಗುತ್ತಾ,"ಆಗಲಿ ಆಗಲಿ." ಎಂದು ಬೆಚ್ಚಿದ ಧ್ವನಿಯಲ್ಲಿ ಹೇಳಿ ಕೆಲ ಕ್ಷಣ ಯೋಚಿಸಿದ. ಅವನಿಗೊಂದು ಉಪಾಯ ಹೊಳೆಯಿತು.

"ಹುಲಿ ಮರಿಯನ್ನು ಸೃಷ್ಟಿಸುತ್ತೇನೆ. ಆದರೆ, ನನಗೆ ಒಂದು ತಿಂಗಳಾದರೂ ಸಮಯ ಬೇಕು." ಅಂತ ಕೇಳಿದ. "ಸರಿ ಕಾಯುತ್ತೇನೆ." ಎಂದಿತು ಹುಲಿ.

“ಒಂದು ತಿಂಗಳು ಪೂರ್ತಿ ನೀನು ಹಾಲು ಅನ್ನದ ಪಥ್ಯದಲ್ಲೇ ಇರಬೇಕು.” ಜಾದೂಗಾರ ಒಂದು ಷರತ್ತು ಹಾಕಿದ.

“ನಾನು ಹಾಲು ಅನ್ನ ತಿನ್ನೋದು ಅಂದರೇನು?” ಮುಖ ಸಿಂಡರಿಸಿತು ಹುಲಿ. ಹಾಗೆ ಪಥ್ಯ ಮಾಡದೇ ಹೋದರೆ ಹುಲಿಮರಿ ಸೃಷ್ಟಿಸಲು ಸಾಧ್ಯವಿಲ್ಲ ಅನ್ನೋದನ್ನ ಜಾದೂಗಾರ ಕಷ್ಟಪಟ್ಟು ಹುಲಿಗೆ ಮನದಟ್ಟು ಮಾಡಿಸಿದ. ಕೊನೆಗೂ ಹುಲಿ ಅವನ ಷರತ್ತನ್ನು ಒಪ್ಪಿಕೊಂಡಿತು.

ಒಂದು ತಿಂಗಳ ನಂತರ ಹುಲಿರಾಯ ಜಾದೂಗಾರನ ಹತ್ತಿರಕ್ಕೆ ಬಂದ. “ಈಗ ನನಗೆ ಹುಲಿಮರಿ ಕೊಡು.” ಕ್ಷೀಣ ಧ್ವನಿಯಲ್ಲಿ ಕೇಳಿದ ಹುಲಿರಾಯ.

ಒಂದು ತಿಂಗಳು ಬರೀ ಹಾಲು ಅನ್ನ ತಿಂದು ಅವನು ಇಳಿದು ಹೋಗಿದ್ದ. ಸಣ್ಣಗಾಗಿದ್ದ ಅವನ ಕಂಠ ಹುಲಿಗೆ

ಹೇಗಿರಬೇಕೋ ಹಾಗೆ ಇರಲಿಲ್ಲ.

ಜಾದೂಗಾರ ತನ್ನ ಹೊಸ ಕೈಚಳಕ ತೋರಿಸಲು ಹಳ್ಳಿಯವರನ್ನೆಲ್ಲ ಕರೆದ. "ಇದು ನನ್ನ ವಿಶೇಷ ಅತಿಥಿಗಾಗಿ ವಿಶೇಷ ಪ್ರದರ್ಶನ. ಈ ಸಲ ಟೋಪಿಯಿಂದ ಮೊಲದ ಬದಲು ಇಲ್ಲಿ ನಿಂತಿರುವ ಪ್ರಾಣಿಯ ಜಾತಿಗೆ ಸೇರಿದ ಮರಿಯನ್ನು ತೆಗೆದು ತೋರಿಸ್ತೀನಿ." ಅಂತ ಘೋಷಿಸಿದ.

ಹ್ರಾಂ.. ಹ್ರೀ.. ಚೂಂ.. ಅದೂ ಇದೂ ಮಂತ್ರ ಹೇಳಿ ಟೋಪಿಯ ಮೇಲೆ ಅನೇಕ ಸಲ ಕೈಯಾಡಿಸಿದ. ಆಮೇಲೆ ಜೋರಾಗಿ ಚೀರುತ್ತಾ ಟೋಪಿಯೊಳಕ್ಕೆ ಕೈಯಿಟ್ಟು ಏನನ್ನೋ ತೆಗೆದ. "ಅರೆ ಬೆಕ್ಕಿನ ಮರಿ... ಬೆಕ್ಕಿನ ಮರಿ..'' ಜನರೆಲ್ಲಾ ಗುಸುಗುಟ್ಟಿದರು. ಬೆಕ್ಕಿನ ಮರಿ 'ಮಿಯಾಂವ್' ಅಂದಿತು.

ಹುಲಿರಾಯನಿಗೆ ತೃಪ್ತಿಯಾಗಲಿಲ್ಲ.

ಕೋಪ ಬಂತು. ಜೋರಾಗಿ ಘರ್ಜಿಸಬೇಕೆಂದು ಬಾಯಿ ತೆರೆಯಿತು. ಎಷ್ಟೇ ಪ್ರಯತ್ನಿಸಿದರೂ ಘರ್ಜಿಸಲು ಆಗಲಿಲ್ಲ. ಅದರ ಬಾಯಿಂದ ಹೊರಟಿದ್ದು 'ಮಿಯಾಂವ್ ಮಿಯಾಂವ್' ಸದ್ದಷ್ಟೇ! ಇದನ್ನು ಕೇಳಿದ ಜನರು ಗೊಳ್ ಅಂತ ನಕ್ಕು ಚಪ್ಪಾಳೆ ತಟ್ಟಿದರು. *

**ಮೂಲ: ಪ್ರಜಾವಾಣಿ ದಿನಪತ್ರಿಕೆ**
**ದಿನಾಂಕ:** 14–01–2006

**ಮನ ಮಂಥನ:**

* ಮಾಂತ್ರಿಕನು ತನ್ನ ಜೀವ ಉಳಿಸಿಕೊಳ್ಳಲು ಮಾಡಿದ ಉಪಾಯದ ಬಗ್ಗೆ ನಿನ್ನ ಅಭಿಪ್ರಾಯವೇನು? ಸ್ನೇಹಿತರೊಂದಿಗೆ ಚರ್ಚಿಸು.

# ಜಯದ್ರಥನ ವಧೆ

– ವಿವಿಧ ಮೂಲಗಳಿಂದ

ವೀರ ಅಭಿಮನ್ಯು



ಕುರುಕ್ಷೇತ್ರದಲ್ಲಿ ಕೌರವರು ಮತ್ತು ಪಾಂಡವರ ನಡುವೆ ಭೀಷಣ ಯುದ್ಧವು ನಡೆಯುತ್ತಿತ್ತು. ಕೌರವರು ತಮ್ಮ ಯೋಧರ ಜೊತೆಗೆ ಸೇರಿ ಯುದ್ಧದಲ್ಲಿ ಒಂದು ರೀತಿ ಸಂಚನ್ನು ಮಾಡಿ ಅರ್ಜುನನನ್ನು

ಯುದ್ಧಭೂಮಿಯಿಂದ ಬಹಳ ದೂರ ಕೊಂಡೊಯ್ದರು. ಅರ್ಜುನನು ಯುದ್ಧಭೂಮಿಯಿಂದ ದೂರ ಹೋದ ನಂತರ ಕೌರವರು ಚಕ್ರವ್ಯೂಹವನ್ನು ರಚಿಸಿದರು. ಯುದ್ಧದಲ್ಲಿ ಶತ್ರುವನ್ನು ಸುತ್ತುವರಿಯಲು ಸೈನ್ಯವನ್ನು ಒಂದು ವಿಶಿಷ್ಟ ರೀತಿಯಲ್ಲಿ ನಿಲ್ಲಿಸಲಾಗುತ್ತದೆ. ಇದರೊಳಗೆ ನುಗ್ಗಲು ಮತ್ತು ಹೊರಬರಲು ಕೇವಲ ಅರ್ಜುನನಿಗೆ ಮಾತ್ರ ಗೊತ್ತಿದೆ ಎಂಬ ವಿಷಯ ಕೌರವರಿಗೆ ತಿಳಿದಿತ್ತು.

ಹಾಗಾಗಿ ಅರ್ಜುನನ ಅನುಪಸ್ಥಿತಿಯಲ್ಲಿ ಚಕ್ರವ್ಯೂಹದ ರಚನೆಯನ್ನು ಮಾಡಿದರು. ಅರ್ಜುನನ ಪುತ್ರನಾದ ಅಭಿಮನ್ಯು ಚಕ್ರವ್ಯೂಹದೊಳಗೆ ಹೋಗುವ ವಿದ್ಯೆಯನ್ನು ಕಲಿತಿದ್ದನು. ಆದರೆ ಚಕ್ರವ್ಯೂಹದಿಂದ ಹೊರಬರಲು ಅವನಿಗೆ ತಿಳಿಯುತ್ತಿರಲಿಲ್ಲ. ಏಕೆಂದರೆ ಅಭಿಮನ್ಯುವು

ತನ್ನ ತಾಯಿಯ ಹೊಟ್ಟೆಯಲ್ಲಿದ್ದಾಗ, ಅರ್ಜುನನು ಸುಭದ್ರೆಗೆ ಚಕ್ರವ್ಯೂಹದ ಬಗ್ಗೆ ಹೇಳುತ್ತಿದ್ದನು. ಆದರೆ ಚಕ್ರವ್ಯೂಹದ ಒಳಗೆ ಹೋಗುವುದನ್ನು ತಿಳಿಸಿದ ನಂತರ ಸುಭದ್ರೆಯು ನಿದ್ದೆ ಮಾಡಿದಳು. ಆದ್ದರಿಂದ ಹೊರಗೆ ಬರುವುದು ಹೇಗೆ ಎಂದು ಅವಳು ಕೇಳಿಸಿಕೊಳ್ಳಲಿಲ್ಲ. ಹಾಗಾಗಿ ಅಭಿಮನ್ಯುವಿಗೆ ಕೇವಲ ಚಕ್ರವ್ಯೂಹವನ್ನು ಭೇದಿಸಿ ಒಳಗೆ ಹೋಗಲು ತಿಳಿದಿತ್ತು, ಆದರೆ ಹೊರಗೆ ಬರಲು ತಿಳಿದಿರಲಿಲ್ಲ.

ಈ ಮಾತನ್ನು ಅಭಿಮನ್ಯುವು ಪಾಂಡವರಿಗೆ ತಿಳಿಸಿದಾಗ, ಇತರ ಪಾಂಡವರು, ಅವನಿಗೆ ನೀನು ಯಾವ ದ್ವಾರದಿಂದ ಒಳಗೆ ಹೋಗುವಿಯೋ ಆ ದ್ವಾರದ ಬಳಿ ನಾವೆಲ್ಲರೂ ನಿಲ್ಲುತ್ತೇವೆ. ಹಾಗೂ ಅದನ್ನು ಮುಚ್ಚಲು ಬಿಡುವುದಿಲ್ಲ. ಆಗ ನೀನು ಸುಲಭವಾಗಿ ಚಕ್ರವ್ಯೂಹದಿಂದ

ಹೊರಗೆ ಬರಬಹುದು. ಎಂದು ಹೇಳುತ್ತಾರೆ. ಆಗ ಕೌರವರು ರಚಿಸಿದ ಚಕ್ರವ್ಯೂಹದೊಳಗೆ ಅಭಿಮನ್ಯುವು ಸುಲಭವಾಗಿ ಪ್ರವೇಶಿಸುತ್ತಾನೆ. ಆದರೆ ಜಯದ್ರಥನು ಇತರ ಪಾಂಡವರೊಂದಿಗೆ ಯುದ್ಧ ಮಾಡಿದನು ಮತ್ತು ಅವರಿಗೆ ಅಭಿಮನ್ಯುವಿನ ಸಹಾಯಕ್ಕಾಗಿ ಹೋಗಲು ಬಿಡಲಿಲ್ಲ. ಕೊನೆಗೆ ಅಭಿಮನ್ಯುವು ಚಕ್ರವ್ಯೂಹದಿಂದ ಹೊರಗೆ ಬರಲು ಆಗಲಿಲ್ಲ. ಅವನು ಒಬ್ಬಂಟಿಯಾಗಿ ಒಳಗೆ ಸಿಲುಕಿದ. ಎಲ್ಲಾ ಕೌರವರು ಒಟ್ಟಾಗಿ ಅವನ ಜೊತೆಗೆ ಯುದ್ಧ ಮಾಡಿದರು.

ಯುದ್ಧವನ್ನು ಮಾಡುತ್ತಾ ಅವನು ನಿಶ್ಶಸ್ತ್ರನಾದನು ಹಾಗೂ ಎಲ್ಲ ಕೌರವರು ಅವನನ್ನು ಸುತ್ತುವರಿದು ಅವನೊಂದಿಗೆ ಯುದ್ಧದ ನಿಯಮಕ್ಕೆ ವಿರುದ್ಧವಾಗಿ ಹೋರಾಡಿದರು. ಕೊನೆಗೆ ಕೌರವರು ಅಭಿಮನ್ಯುವಿನ ಹತ್ಯೆಯನ್ನು ಮಾಡಿದರು.

ಧರ್ಮಕ್ಕಾಗಿ ಹೋರಾಡಿದ ಅವನಿಗೆ ವೀರಗತಿ ಪ್ರಾಪ್ತವಾಯಿತು. ಅವನ ಮೃತ್ಯುವಿನ ನಂತರ ಪಾಂಡವರನ್ನು ತುಂಬಾ ದ್ವೇಷಿಸುತ್ತಿದ್ದ ಜಯದ್ರಥನು ಅಭಿಮನ್ಯುವಿನ ತಲೆಯನ್ನು ಒದೆಯುವ ಮೂಲಕ ಇನ್ನಷ್ಟು ಅವಮಾನ ಮಾಡಿದನು.

ಅಭಿಮನ್ಯುವಿನ ಮೃತ್ಯುವಾದ ವಿಷಯು ಕೇಳಿ ಅರ್ಜುನನ ಪುತ್ರಶೋಕದಿಂದ ಅತ್ಯಂತ ದುಃಖಿತನಾಗುತ್ತಾನೆ. ತನ್ನ ಪುತ್ರನ ಮೃತ್ಯುವಿಗಿಂತಲೂ ಹೆಚ್ಚು ಅವನಿಗೆ ಜಯದ್ರಥನ ಕೀಳುಮಟ್ಟದ ಕೃತ್ಯಯ ಬಗ್ಗೆ ಹೆಚ್ಚು ಕ್ರೋಧ ಉಂಟಾಗಿತ್ತು.

ಆಗ ಅರ್ಜುನನು,'ನಾಳೆ ಸೂರ್ಯಾಸ್ತವಾಗುವುದರ ಒಳಗೆ ನಾನು ಜಯದ್ರಥನನ್ನು ವಧಿಸುವೆನು. ಒಂದು ವೇಳೆ

ಹೀಗೆ ಮಾಡಲು ಆಗದಿದ್ದಲ್ಲಿ ನಾನು ನನ್ನನ್ನು ಅಗ್ನಿಗೆ ಸಮರ್ಪಿಸಿಕೊಳ್ಳುವೆನು (ಬೆಂಕಿಯಲ್ಲಿ ಜೀವಂತವಾಗಿ ಪ್ರವೇಶ ಮಾಡಿ ಮರಣ ಹೊಂದುವೆ).' ಎಂಬ ಕಠೋರ ಪ್ರತಿಜ್ಞೆಯನ್ನು ಸಹ ಮಾಡುತ್ತಾನೆ. ಈ ವಿಷಯವನ್ನು ಕೇಳಿ ಜಯದ್ರಥ ಮತ್ತು ಕೌರವರು ಬಹಳ ಹೆದರಿಹೋದರು.

ಜಯದ್ರಥನನ್ನು ವಧಿಸುವುದು ಅರ್ಜುನನಿಗೇನೂ ದೊಡ್ಡ ವಿಷಯವಾಗಿರಲಿಲ್ಲ. ಜಯದ್ರಥನು ದುರ್ಯೋಧನನ ಸಹೋದರಿಯ ಪತಿಯಾಗಿದ್ದನು. ಅವನ ರಕ್ಷಣೆಗಾಗಿ ಕೌರವರು ಅವನ ಸುತ್ತಲೂ ಮಹಾನ್ ಯೋಧರ ದೊಡ್ಡ ಕವಚವನ್ನೇ ನಿಲ್ಲಿಸಿಬಿಟ್ಟರು. ಮಧ್ಯಾಹ್ನದ ತನಕ ಅರ್ಜುನನು ಆ ಸೈನಿಕರ ಜೊತೆಗೆ ಹೋರಾಡುತ್ತಿದ್ದನು. ಆದರೆ ಅಲ್ಲಿ ಎಲ್ಲಿಯೂ

ಜಯದ್ರಥನು ಕಾಣಿಸುತ್ತಿರಲಿಲ್ಲ. ಸೂರ್ಯಾಸ್ತವಾಗಲು ಹೆಚ್ಚು ಸಮಯ ಉಳಿದಿರಲಿಲ್ಲ. ಆದರೆ ಜಯದ್ರಥನ ಸುಳಿವೇ ಇರಲಿಲ್ಲ.

ಅರ್ಜುನನು ಶ್ರೀಕೃಷ್ಣನ ಭಕ್ತನಾಗಿದ್ದನು. ಹಾಗಾಗಿ ಅವನಿಗೆ ತನ್ನ ಭಕ್ತನಾದ ಅರ್ಜುನನ ಪ್ರತಿಜ್ಞೆಯನ್ನು ಪೂರ್ಣಗೊಳಿಸಬೇಕಾಗಿತ್ತು. ಹಾಗೂ ಕೌರವರು ಅರ್ಜುನನ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ಆಗದಂತೆ ಪ್ರಯತ್ನ ಮಾಡುತ್ತಾರೆಂಬುದು ಸಹ ಕೃಷ್ಣನಿಗೆ ಗೊತ್ತಿತ್ತು. ಅರ್ಜುನನ ಪ್ರತಿಜ್ಞೆ ಪೂರ್ಣವಾಗದಿದ್ದರೆ ಕೌರವರಿಗೆ ಲಾಭವಾಗುತ್ತದೆ ಎಂದು ಸಹ ಶ್ರೀಕೃಷ್ಣನಿಗೆ ಗೊತ್ತಿತ್ತು. ಅರ್ಜುನನು ಸೂರ್ಯಾಸ್ತ ಆಗುವುದರೊಳಗೆ ಜಯದ್ರಥನ ವಧೆ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದನು.

ಎಲ್ಲಿಯ ತನಕ ಸೂರ್ಯನು ಆಕಾಶದಲ್ಲಿ ಕಾಣಿಸುತ್ತಾನೆಯೋ ಅಲ್ಲಿಯು ತನಕ ಜಯುದ್ರಥನು ಅರ್ಜುನನ ಎದುರು ಬರಲಾರನು ಎಂದು ಶ್ರೀಕೃಷ್ಣನಿಗೆ ಅರಿವಾಯಿತು. ಹಾಗೂ ಅವರು ತಮ್ಮ ಸುದರ್ಶನ ಚಕ್ರದಿಂದ ಸೂರ್ಯನನ್ನು ಮರೆಮಾಚಿದರು. ಸೂರ್ಯನು ಕಾಣಿಸದೇ ಇದ್ದಾಗ ಎಲ್ಲರೂ ಸೂರ್ಯಾಸ್ತವಾಯಿತು ಎಂದು ತಿಳಿದುಕೊಂಡರು.

ತನ್ನ ಪ್ರತಿಜ್ಞೆಗನುಸಾರ ಸೂರ್ಯಾಸ್ತದೊಳಗೆ ಅರ್ಜುನನು ಜಯದ್ರಥನನ್ನು ಕೊಲ್ಲದಿದ್ದರೆ ಅಗ್ನಿಪ್ರವೇಶ ಮಾಡಬೇಕಿತ್ತು. ಹಾಗಾಗಿ ಅರ್ಜುನನಿಗಾಗಿ ಕಟ್ಟಿಗೆಗಳ ಚಿತೆಯನ್ನು ತಯಾರಿಸಲಾಯಿತು ಹಾಗೂ ಅದಕ್ಕೆ ಬೆಂಕಿ ಸಹ ಹಚ್ಚಲಾಯಿತು. ಕೌರವರು ಮತ್ತು ಪಾಂಡವರು ಎಲ್ಲರೂ ಒಟ್ಟಿಗೆ ಆ ಜಾಗದಲ್ಲಿ ಒಟ್ಟು ಸೇರಿದರು.

ಜಯದ್ರಥ ಹಾಗೂ ಎಲ್ಲ ಕೌರವರು ಅರ್ಜುನನ ಪ್ರತಿಜ್ಞೆ ಪೂರ್ಣವಾಗಲಿಲ್ಲ ಹಾಗೂ ಅವನು ಈಗ ಅಗ್ನಿಪ್ರವೇಶ ಮಾಡಬೇಕು ಎಂದು ಬಹಳ ಸಂತೋಷದಲ್ಲಿದ್ದರು. ಎಲ್ಲ ಪಾಂಡವರು ಅರ್ಜುನನ ಅಗ್ನಿಪ್ರವೇಶದ ಪ್ರತಿಜ್ಞೆಯಿಂದ ಬಹಳ ದುಃಖಿಯಾಗಿದ್ದರು. ಅರ್ಜುನನು ಅತ್ಯುತ್ತಮ ಬಿಲ್ಲುಗಾರನಾಗಿದ್ದನು. ಅವನಿಗೆ ತನ್ನ 'ಗಾಂಡೀವ' ಧನುಷ್ಯವು ಬಹಳ ಪ್ರಿಯವಾದುದಾಗಿತ್ತು. ಸುಡುವ ಚಿತೆಯಲ್ಲಿ ಪ್ರವೇಶ ಮಾಡುವ ಮೊದಲು ಅರ್ಜುನನು ತನ್ನ ಧನುಷ್ಯಬಾಣವನ್ನು ಎತ್ತಿದನು ಮತ್ತು ಭಗವಂತ ಶ್ರೀಕೃಷ್ಣನಿಗೆ ನಮಸ್ಕರಿಸಿದನು. ಅವನು ಅಗ್ನಿಗೆ ಸಹ ನಮಸ್ಕಾರ ಮತ್ತು ಪ್ರಾರ್ಥನೆಯನ್ನು ಮಾಡಿದನು.

ಶ್ರೀಕೃಷ್ಣನು ಅತ್ಯಂತ ಪ್ರೇಮದಿಂದ ತನ್ನ ಶಿಷ್ಯನತ್ತ ನೋಡಿದನು ಮತ್ತು ಅದೇ

ಸಮಯದಲ್ಲಿ ಸೂರ್ಯನಿಗೆ ಅಡ್ಡ ಹಿಡಿದಿದ್ದ ಸುದರ್ಶನ ಚಕ್ರವನ್ನು ಸರಿಸಿದನು. ಇದರಿಂದ ಎಲ್ಲೆಡೆ ಸೂರ್ಯಪ್ರಕಾಶ ಹರಡಿತು. ಕೆಲವು ಕ್ಷಣಗಳ ಕಾಲ ಯಾರಿಗೂ ಏನಾಗುತ್ತಿದೆ ಎಂದು ತಿಳಿಯಲಿಲ್ಲ. ಇನ್ನೂ ಸೂರ್ಯಾಸ್ತವಾಗಿಲ್ಲ, ಈ ವಿಷಯ ಗಮನಕ್ಕೆ ಬಂದೊಡನೆ ಕೌರವ ಸೇನೆಯಲ್ಲಿ ಕೋಲಾಹಲ ಉಂಟಾಯಿತು.

ಜಯದ್ರಥನು ದಿಗ್ಮೂಢನಾಗಿ ನಿಂತಲ್ಲಿಯೇ ನಿಂತಿದ್ದನು. ಅಷ್ಟರಲ್ಲಿ ಶ್ರೀಕೃಷ್ಣನು ಅರ್ಜುನನಿಗೆ,'ಅರ್ಜುನಾ, ಏನು ನೋಡುತ್ತಿರುವೆ, ಧನುಷ್ಯಕ್ಕೆ ಬಾಣ ಹೂಡು, ಇನ್ನೂ ಸೂರ್ಯಾಸ್ತವಾಗಿಲ್ಲ. ಅಲ್ಲಿ ನೋಡು ಸೂರ್ಯ, ಇಲ್ಲಿ ನೋಡು ನಿನ್ನೆದುರು ಜಯದ್ರಥ. ವಧಿಸು ಅವನನ್ನ.' ಎಂದು ಆದೇಶಿಸಿದನು. ಅರ್ಜುನನು ಒಂದು ಕ್ಷಣ ಸಹ ತಡ ಮಾಡದೇ ಜಯದ್ರಥನ

ತಲೆಯನ್ನು ದೇಹದಿಂದ ಬೇರ್ಪಡಿಸಿಬಿಟ್ಟನು. ಈ ರೀತಿ ದುಷ್ಟ ಜಯದ್ರಥನ ವಧೆಯಾಯಿತು ಮತ್ತು ಅರ್ಜುನನ ಪ್ರತಿಜ್ಞೆಯು ಸಹ ಪೂರ್ಣವಾಯಿತು. *

**ಮನ ಮಂಥನ**

* ಮಹಾಭಾರತದಲ್ಲಿನ ಅಭಿಮನ್ಯು ಗರ್ಭದಲ್ಲಿದ್ದಾಗ ಚಕ್ರವ್ಯೂಹವನ್ನು ಭೇದಿಸುವ ಕಥೆಯನ್ನು ಕೃಷ್ಣ ಹೇಳಿದ. ಆದರೆ ಆ ವ್ಯೂಹದಿಂದ ಹೊರಬರುವ ಕಥೆಯನ್ನು ಯಾಕೆ ಹೇಳಲಿಲ್ಲ? ಇದರ ಹಿನ್ನಲೆಯ ಕಥೆಯನ್ನು ಹಿರಿಯರಿಂದ ತಿಳಿ.

‘When Jatin Stopped Running’ ಇಂಗ್ಲಿಷ್ ಕಥೆಯ ಕನ್ನಡ ಅನುವಾದ

# ಜತೀನ್ ಓಡುವುದನ್ನು ನಿಲ್ಲಿಸಿದಾಗ

ಅನುವಾದ:
ಸಂಗಮೇಶ ಎಮ್
ಧ್ವನಿ ಬಳಗ



ಖುಷಿ ಓದಿಗಾಗಿ

ಪುಟ್ಟ ಜತೀನನಿಗೆ ಬೀದಿ ನಾಯಿಗಳೆಂದರೆ ಹೆದರಿಕೆ. ಒಂದು ಸಂಜೆ ಬೀದಿ ನಾಯಿಯೊಂದು ಅವನತ್ತ ಬೊಗಳಿದಾಗ ಅವನು ತಿರುಗಿ ಓಡಲು ಪ್ರಾರಂಭಿಸಿದನು. ನಾಯಿ ಜೋರಾಗಿ

ಬೊಗಳುತ್ತಾ ಅವನ ಹಿಂದೆ ಓಡಿತು. ಜತೀನ್, ಮನೆಯೇ ಸುರಕ್ಷಿತವಾದ ಸ್ಥಳವೆಂದು ಭಾವಿಸಿ, ಅವನು ವೇಗವಾಗಿ ಓಡುತ್ತಾನೆ.

ನಾಯಿ ತನ್ನ ಮಗನನ್ನು ಅಟ್ಟಿಸಿಕೊಂಡು ಬರುತ್ತಿರುವುದನ್ನು ಜತೀನನ ತಾಯಿ ನೋಡಿ,"ಜತೀನ್, ನಿಲ್ಲು." ಎಂದು ಕೂಗಿದಳು.

ತನ್ನ ತಾಯಿಯ ಮಾತನ್ನು ಕೇಳಿ ಜತೀನ್ ನಿಧಾನವಾಗಿ ಓಡತೊಡಗಿದ.

"ಓಡುವುದನ್ನು ನಿಲ್ಲಿಸು. ತಿರುಗಿ ನಾಯಿಯನ್ನು ಎದುರಿಸು." ಎಂದು ತಾಯಿ ಹೇಳಿದಳು. ಅವಳ ಧ್ವನಿಯಲ್ಲಿ ಅಂತಹ ಅದ್ಭುತವಾದ ಶಕ್ತಿ ಇತ್ತು, ಜತೀನ್ ಓಡುವುದನ್ನು ನಿಲ್ಲಿಸಿ ಹಿಂದೆ ತಿರುಗಿ ನಾಯಿಯ ಕಡೆಗೆ ನೋಡಿದನು. ಒಂದು ಕ್ಷಣ ನಾಯಿಯೂ ನಿಂತಿತು. ಅವನು ತಿರುಗಿ

ಅದನ್ನು ಎದುರಿಸಿದಾಗ, ನಾಯಿ ಬೊಗಳುವುದನ್ನು ನಿಲ್ಲಿಸಿ, ಸದ್ದಿಲ್ಲದೆ ಹೊರಟುಹೋಯಿತು.

ತಾಯಿ ಜತೀನ್‌ಗೆ,"ಮಗನೇ, ಯಾವುದೇ ಪರಿಸ್ಥಿತಿಯಲೂ ಓಡಿಹೋಗಬೇಡ. ಯಾವಾಗಲೂ ಅದನ್ನು ಎದುರಿಸು. ನೀನು ವಿಜಯಶಾಲಿಯಾಗುತ್ತೀ." ಎಂದಳು. *

**ಮೂಲ: ಅಂತರ್ಜಾಲ**

# When Jatin Stopped Running



ಮೂಲ: ಅಂತರ್ಜಾಲ

ಮಕ್ಕಳಿಗಾಗಿ

Little Jatin was afraid[1] of stray[2] dogs. One evening, when a street[3] dog barked at him, he turned and started running. The dog ran after him barking loudly[4].

**ಹೊಸಪದಗಳು:**

1. **Afraid** (ಅಫ್ರೇಡ್) - ಭಯಪಟ್ಟ/ಹೆದರಿದ/ಆತಂಕ
2. **Stray** (ಸ್ಟ್ರೇ) - ಗೊತ್ತುಗುರಿಯಿಲ್ಲದ/ದಿಕ್ಕು ತಪ್ಪಿದ
3. **Street** (ಸ್ಟ್ರೀಟ್) - ರಸ್ತೆ/ಬೀದಿ/ಮಾರ್ಗ
4. **Loudly** (ಲೌಡ್ಲೀ) - ಜೋರಾದ/ಗಟ್ಟಿಯಾದ ಧ್ವನಿ

The only safe[5] place, Jatin thought[6], was home. He runs faster.

Jatin's mother saw the dog chasing her son. She called out to him "Jatin, stop."

Hearing his mother's voice, Jatin slowed down.

"Stop running. Turn and face the dog," his mother ordered. Such was the magic[7] in her voice, Jatin found himself turning back and facing the dog. The moment

ಹೊಸಪದಗಳು:

5. **Safe** (ಸೇಫ್) - ಸುರಕ್ಷತೆ/ಭದ್ರತೆ

6. **Thought** (ತಾಟ್)-ಯೋಚನೆ/ವಿಚಾರ/ಆಲೋಚನೆ

7. **Magic** (ಮ್ಯಾಜಿಕ್)- ಮಾಯಾಪ್ರಭಾವ/ಅದ್ಭುತ ಶಕ್ತಿ

Jatin stopped running, the dog stopped too. When he turned and faced it, the dog stopped barking and quietly[8] walked away.

Mother said to Jatin, "Never run away from a situation[9], my son. Always face it. You will be - victorious[10]." *

**ಹೊಸಪದಗಳು:**

**8. Quietly** (ಕ್ವೈಅಟ್ಲೀ) - **ಸುಮ್ಮನಾಗು/ಶಾಂತವಾಗು**

**9. Situation** (ಸಿಚುಏಷ್ನ್) - **ಪರಿಸ್ಥಿತಿ/ಸಂದರ್ಭ**

**10. Victorious** (ವಿಕ್ಟರಿಅಸ್) - **ಜಯಶಾಲಿ/ವಿಜೇತ**

# ನನ್ನ ತೋಟ

ಹಾಡು



ಖುಷಿ ಓದಿಗಾಗಿ

ನೋಡಲು ಸುಂದರ
ಚಲುವಿನ ಹಂದರ
ನಮ್ಮನೆ ಹಿತ್ತಲಲಿ!
ತರತರ ಸುಮಗಳು
ಬಳಕುತಲಿರುವವು
ನನ್ನಯ ತೋಟದಲಿ!!

ಕಳೆಯನು ಕೀಳುವೆ
ನೀರನು ಹಣಿಸುವೆ
ಬಿಡುವಿನ ವೇಳೆಯಲಿ!
ಪೋಷಣೆ ಮಾಡುವೆ
ಬೇಸರ ಕಳೆಯುವೆ
ಶ್ರಮಿಸುತ ತೋಟದಲಿ!!

ತಿನ್ನಲು ರುಚಿಕರ
ದೇಹಕ್ಕೆ ಹಿತಕರ
ಬೆಳೆಯುವ ತರಕಾರಿ!
ನೋಡಲು ಚಿಕ್ಕದು
ನನ್ನಯ ತೋಟಿದು
ಸುಂದರ ಮಿತಿಮೀರಿ !!

ಅರಳಿದ ಹೂಗಳ
ಪರಿಮಳ ಹೀರಲು
ಬರುವವು ದುಂಬಿಗಳು!
ಹೂವಿಂದೂವಿಗೆ
ಹಾರುತಲಿರುವವು
ಪಾತರಗಿತ್ತಿಗಳು !!

**– ಪ.ಗು. ಸಿದ್ಧಾಪುರ**
**ಆಕರ: ನಂದನದಲಿ ಚಂದನ**

ಹಾಡು

# ಒಂಟೆ



ಒಂಟೆ ಬಂತು
ಒಂಟೆ ಬಂತು
ಒಂಟೆ ಬಂತು ಊರಿಗೆ!

ಕೆಲಸಗಿಲಸ
ಪಾಠಗೀಠ
ಈಗ ಬೇಕು ಯಾರಿಗೆ?

ಓಡಿ ಬನ್ನಿ
ನೋಡ ಬನ್ನಿ
ಮರಳುಗಾಡ ಹಡಗವ

ವಂಕ ಗೋಣು
ಡೊಂಕ ಡುಬ್ಬ
ಮೈದಾಳಿದ ವಿಗಡವ

ಸಾರಿಗೆ ಸಂಪರ್ಕ ಪಾಠಕ್ಕೆ ಪೂರಕ

**ರಚನೆ: ಸಿದ್ಧಯ್ಯ ಪುರಾಣಿಕ**
**ಆಕರ: ಬಣ್ಣ ಬಣ್ಣದ ಓಕುಳಿ ಮಕ್ಕಳ ಪದ್ಯಗಳು**



‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ
ಉಚಿತ ಹಂಚಿಕೆಗಾಗಿ


**ಸಂಪರ್ಕ ಮಾಹಿತಿ:**
**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# 76,‘ಪುಷ್ಪಾಂಜಲಿ’ 3ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ 580 007**
**ಮೊ: 99866 61055**

**dhwanitrust@gmail.com**
**www. dhwanitrust.org**



ಗಮನಿಸಿ: ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.